

# ನಟನಾಗದೆ ನಿರ್ದೇಶಕನಾದೆ!

**ತಿಲಕ್**
ಸ್ಟಾರ್‌ಸುವರ್ಣದ 'ತ್ರಿವೇಣಿ ಸಂಗಮ'ದ ನಿರ್ದೇಶಕ

ಮಧ್ಯವಯಸ್ಸಿನವರ ಪ್ರೇಮ ಕಥನ. ಇಲ್ಲಿ ಪ್ರೇಮ ಸೇತು ಆಕರ್ಷಣೆಯಲ್ಲ. ಸಮಾನ ಆಸಕ್ತಿ. ಹೇಗೆ ಇಬ್ಬರ ಬದುಕಿನ ಭಾಗವಾದ ಸಂಗೀತ ಭಾವ ಮತ್ತು ಬದುಕಿಗೆ ಕಾರಣ ಆಗುತ್ತದೆ. ಇಬ್ಬರಲ್ಲಿ ಬೆಸೆಯುವ ಪ್ರೇಮದ ಗಟ್ಟಿತನ ಹೇಗೆ ಉಳಿಯುತ್ತದೆ. ಅವರ ನಡುವೆ ಉಂಟಾಗುವ ಮನಸ್ತಾಪಗಳು, ಒಬ್ಬರನ್ನೊಬ್ಬರು ಗೌರವಿಸುವ, ಹುರಿದುಂಬಿಸುವ, ಬೆಂಬಲಿಸುವ ಕಥಾನಕ ಧಾರಾವಾಹಿಯ ಕೇಂದ್ರ. ಅಂದರೆ ಅದಕ್ಕೆ ಸಂಗೀತವೇ ಪ್ರಧಾನ. ಸದ್ಯದ ಸಂದರ್ಭದಲ್ಲಿ ಈ ರೀತಿಯ ಸಂವೇದನಾಶೀಲ ಕಲೆಯ ವಸ್ತುವನ್ನು ಇಟ್ಟುಕೊಂಡು ಧಾರಾವಾಹಿ ಮಾಡುತ್ತಿಲ್ಲ. ಈ ಅಂಶವನ್ನು ಗುರುತಿಸಿ ಸಂಗೀತವನ್ನು ಬದುಕಾಗಿಸಿಕೊಂಡ ಪಾತ್ರಗಳ ನಡುವೆ ಸಾಮರಸ್ಯ– ಸಂಘರ್ಷದ ಸಮತೋಲನವನ್ನು ಕಾಪಾಡುವುದೇ ತ್ರಿವೇಣಿ ಸಂಗಮ.

★ *ಏನಾಗಬೇಕು ಅಂದುಕೊಂಡಿದ್ರಿ, ಏನಾದ್ರಿ?*

ನಟನಾಗಬೇಕು ಎಂದು ಬಂದವನು. ಮೂಲತಃ ನಾನೊಬ್ಬ ರಂಗಭೂಮಿಯ ನಟ. ಕಾಲೇಜುಗಳಲ್ಲಿ ನಾಟಕಗಳನ್ನು ನಿರ್ದೇಶಿಸುತ್ತಾ... ಪೂರ್ಣಾವಧಿಯಲ್ಲಿ ಹವ್ಯಾಸಿ ರಂಗತಂಡಗಳಲ್ಲಿ ರಂಗದ ಮೇಲೆ ರಂಗದ ಹಿಂದೆ ಪಾತ್ರ ನಿರ್ವಹಿಸಿದೆ. ಸಾಕಷ್ಟು ನಾಟಕಗಳನ್ನು ಆಡಿದೆ. ಸಿಕ್ಕಾಪಟ್ಟೆ ಸಂತೋಷವನ್ನೂ, ಮನೋ ತೃಪ್ತಿಯನ್ನೂ ರಂಗಭೂಮಿ ನನಗೆ ಕೊಟ್ಟಿದೆ. ಆರ್ಥಿಕವಾಗಿ ಮಾತ್ರ ಹೇಳುವಂತಹ ಬೆಂಬಲ ಅಲ್ಲಿ ಸಿಗಲಿಲ್ಲ. ಹೀಗಿರುವಾಗ ಪರ್ಯಾಯ ಆಲೋಚನೆ ಮಾಡಿದೆ. ಆಗ ನನ್ನ ಕೈಹಿಡಿದು, ತುತ್ತು ಕೊಡಲು ಮುಂದಾಗಿದ್ದು ಸಿನಿಮಾ– ಟಿವಿ. ಚೈತನ್ಯ ಕುಮಾರ್ 'ಆದಿನಗಳು' ನಿರ್ದೇಶನ ಮಾಡುತ್ತಿದ್ದರು. ಅವರ ಜೊತೆ ಸಹ ನಿರ್ದೇಶಕನಾಗಿ ಕೆಲಸ ಮಾಡಲು ಅವರು ಅವಕಾಶ ನೀಡಿದರು. ಅದಕ್ಕೂ ಮುನ್ನ 'ಕಿಚ್ಚು' ಧಾರಾವಾಹಿಗೆ ಎಪಿಸೋಡ್ ನಿರ್ದೇಶಕನಾಗಿದ್ದೆ.

★ *ಬದಲಾವಣೆ ಬಯಸಿ ನಿರ್ದೇಶನಕ್ಕೆ ಬಂದ್ರಾ?*

ಟಿವಿಯಲ್ಲಿ ಹಾಸ್ಯ ಧಾರಾವಾಹಿಯೊಂದರಲ್ಲಿ ನಟಿಸುತ್ತಿದ್ದೆ. ಬಣ್ಣ ಹಚ್ಚಿ ಸರದಿಗಾಗಿ ಕಾಯುತ್ತಾ ಕೂರಬೇಕಿತ್ತು. ಸಣ್ಣ ಸಂದರ್ಭಕ್ಕಾಗಿ ದಿನವಿಡೀ ಕಾಯುವುದು ಪಡಿಪಾಟಲು ಅನ್ನಿಸಿತು. ನನಗೆ ಸಮಯ ವ್ಯರ್ಥ ಮಾಡುತ್ತಿದ್ದೇನೆ. ಸಮಯವನ್ನು ಬಳಸಿಕೊಳ್ಳಬೇಕು ಅನ್ನಿಸಿತು. ಅಂತಹ ಸಂದರ್ಭದಲ್ಲಿ ನನ್ನ ಕಣ್ಣಿಗೆ ನಿರ್ದೇಶನದ ತಂಡ ಬಿದ್ದಿತು. ಬೆಳಿಗ್ಗೆಯಿಂದ ಸಂಜೆವರೆಗೆ ನಿರ್ದೇಶಕರಿಗೆ ನಿಮಿಷವೂ ಪುರುಸೊತ್ತು ಇರುತ್ತಿರಲಿಲ್ಲ. ಸಮಯವನ್ನು ದುಡಿಸಿಕೊಳ್ಳಬೇಕು ಎನ್ನುವ ತುಡಿತ ನನ್ನನ್ನು ನಿರ್ದೇಶನದತ್ತ ಕರೆದುಕೊಂಡುಬಂತು. ಅದೃಷ್ಟಕ್ಕೆ ಅಲ್ಲಿ ಕೆಲಸ ಮಾಡುವ ಅವಕಾಶವೂ ಸಿಕ್ಕಿತು. 'ದೇವಿ'ಯಲ್ಲಿ ಸಹನಿರ್ದೇಶನ ಮಾಡಿದವನು 'ಶ್ರೀರಸ್ತು ಶುಭಮಸ್ತು'ನಿಂದ ಪೂರ್ಣಪ್ರಮಾಣದ ನಿರ್ದೇಶಕನಾದೆ.

★ *ತ್ರಿವೇಣಿ ಸಂಗಮದ ವಿಶೇಷತೆ ಏನು?*

★ *ಧಾರಾವಾಹಿ ಅಂದರೆ ದಾರದುಂಡೆಯಿಂದ ದಾರದ ತುದಿಯನ್ನು ಎಳೆಯುತ್ತಾ ಸಾಗುವಂತೆ ತೋರಿಸುವುದಾ?*

ಇಂತಹ ಆರೋಪಗಳು ಸಾಮಾನ್ಯ ಅನ್ನುವಷ್ಟು ಹಲವಾರು ಧಾರಾವಾಹಿಗಳಿಂದ ವೀಕ್ಷಕರಿಗೆ ಅನ್ನಿಸಿದೆ. ಅದನ್ನು ಗಮನದಲ್ಲಿ ಇಟ್ಟುಕೊಂಡೇ ನಾವು ಬೇರೆಯ ರೀತಿಯಲ್ಲಿ ಕಥೆಯನ್ನು ನಿರೂಪಿಸುವ ಉದ್ದೇಶ ಹೊಂದಿದ್ದೇವೆ. ವಾಸ್ತವದ ಎಲ್ಲೆಯನ್ನು ಮೀರದಂತೆ ಬದುಕಿಗೆ ಹತ್ತಿರವಾಗುವಂತೆ ಕಥೆ ಸಾಗುತ್ತದೆ. ವಸ್ತುವಿನಲ್ಲಿ ನಾವಿನ್ಯತೆ ಇದೆ. ಸಂಪೂರ್ಣ ಕಥೆ ಸಂಗೀತ ಕೇಂದ್ರಿತ. ಉಳಿದದ್ದು ಅದಕ್ಕೆ ಪೂರಕವಾಗಿ ಬರಬೇಕು. ಎಲ್ಲೂ ಬೋರ್ ಅನ್ನಿಸಬಾರದು. ಕಥೆಯನ್ನು ಎಲ್ಲಿಯೂ ಎಳೆಯದೆ ಅಗತ್ಯದಷ್ಟನ್ನು ಮಾತ್ರ ಹೇಳುತ್ತೇವೆ. ನಾಟಕೀಯತೆ ಇದ್ದರೂ ಅತಿರೇಕ ನಾಟಕ ಅನ್ನಿಸದಂತೆ ನಮ್ಮ ಧಾರಾವಾಹಿಯನ್ನು ಮಾಡುತ್ತೇವೆ. ಪಾತ್ರಗಳ ಆಯ್ಕೆಯನ್ನೂ ಹಾಗೆಯೇ ಮಾಡಿದ್ದೇವೆ. ಅನುಪ್ರಭಾಕರ್ ಮುಖರ್ಜಿ, ಹಾಗೂ ರಾಜೇಶ್ ಇಬ್ಬರೂ ಹಿರಿಯ ನಟರು. ಇಬ್ಬರೂ ಮೊದಲು ಏಕತಾನತೆ ಕಾಡುತ್ತದೆ ಎಂದಿದ್ದರು. ಹಾಗಾಗುವುದಿಲ್ಲ ಎಂದಿದ್ದೇವೆ. ಕಥೆ ಅವರಿಗೆ ಇಷ್ಟವಾಗಿದೆ.

★ *ಓದು ಮತ್ತು ಹಿನ್ನೆಲೆ ಪ್ರೇರಣೆ ಬಗ್ಗೆ ಹೇಳಿ?*

ಮೂಲತಃ ಉಡುಪಿ. ಓದಿದ್ದು ಬೆಳೆದಿದ್ದು ಬೆಂಗಳೂರು. ಏನೋ ಒಂದು ಪದವಿ ಬೇಕು ಎನ್ನುವ ಏಕೈಕ ಕಾರಣಕ್ಕೆ ಬಿ.ಕಾಂ ಮಾಡಿದ್ದೇನೆ. ಆರಂಭದಿಂದಲೂ ನನಗೆ ನಟನೆಯ ಒಲವು ಇತ್ತು. ಓದುವ ಅಭ್ಯಾಸ ಕೂಡ ಇತ್ತು. ನನ್ನ ಬರವಣಿಗೆಗೆ ಕನ್ನಡ ದಿಗ್ಗಜ ಬರಹಗಾರರು ಪ್ರೇರಕರಾಗಿದ್ದಾರೆ. ದ.ರಾ.ಬೇಂದ್ರೆ ಅವರ ಕಾವ್ಯ ಪ್ರೇಮಿ ನಾನು. ಕುವೆಂಪು, ಕಾರಂತ, ಮಾಸ್ತಿಯವರನ್ನು ಓದಿಕೊಂಡಿದ್ದೇನೆ. ಕಾರ್ನಾಡ್ ಅವರ ನಾಟಕ ಇಷ್ಟ. ಅವರನ್ನೂ ಓದಿದ್ದೇನೆ. ಅವರ ನಾಟದಲ್ಲಿ ನಟಿಸಿದ್ದೇನೆ. ಒಡನಾಡಿದ್ದೇನೆ. ಕಾರ್ನಾಡ್ ಅವರ 'ಒಡಕಲು ಬಿಂಬ' ಏಕವ್ಯಕ್ತಿ ರೂಪಕದಲ್ಲಿ ತಾಂತ್ರಿಕ ಕೆಲಸದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದೆ. ಅದು ಅತ್ಯಂತ ಖುಷಿಯ ಸಂಗತಿ.

■ ರಾಗು